ಎನ್. ಜಗನ್ನಾಥ ಪ್ರಕಾಶ್

# ಅದ್ವಿತೀಯ ಕಲಾವಿದೆ ಸೋನುಬಾಯಿ



ತಾಯಿಯ ಇಚ್ಛೆಯಂತೆ ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಬೇಕೆಂದು ನಾಲ್ಕಾರು ಗುರುಗಳಿಂದ ಸಂಗೀತ ಅಭ್ಯಾಸ ಮಾಡಿ, ಅನಿವಾರ್ಯವಾಗಿ ಬಣ್ಣದ ಜಗತ್ತಿಗೂ ಕಾಲಿಟ್ಟು, ಸಂಗೀತ ಹಾಗೂ ಅಭಿನಯ ಎರಡರಲ್ಲೂ ಪ್ರಸಿದ್ಧರಾದವರು ಸೋನುಬಾಯಿ ದೊಡ್ಡಮನಿ. ಲಕ್ಷ್ಮೇಶ್ವರದ ಕಲಾಕುಟುಂಬ 'ದೊಡ್ಡಮನಿ'ಗೆ ಸೇರಿದ ಪೀರವ್ವ ಅವರ ಮಗಳು ಸೋನುಬಾಯಿ.

ಉತ್ತರಾದಿ ಸಂಗೀತ, ಅಭಿನಯ, ನೃತ್ಯಗಳಲ್ಲಿ 'ದೊಡ್ಡಮನಿ' ಕುಟುಂಬ ಸಂಪೂರ್ಣವಾಗಿ ತೊಡಗಿಸಿಕೊಂಡಿತ್ತು. ಪೀರವ್ವನ ದೊಡ್ಡಕ್ಕ ಗ್ವಾಲಿಯರ್ ಘರಾಣದಲ್ಲಿ ಖ್ಯಾತಿಗಳಿಸಿದ್ದ ದೊಡ್ಡ ರಾಜಾಸಾನಿ. ಇವರು ಸಂಗೀತ ಕ್ಷೇತ್ರ ಮಾತ್ರವಲ್ಲ ರಂಗಭೂಮಿಯಲ್ಲೂ ಛಾಪು ಒತ್ತಿದವರು. ಒಡಹುಟ್ಟಿದ ಎಂಟು ಮಂದಿಗೆ ಸಂಗೀತ– ರಂಗಕಲೆ ತರಬೇತಿ ನೀಡಿ 'ಮಹಿಳಾ ಸಂಗೀತ ನಾಟಕ ಮಂಡಲಿ' ಸ್ಥಾಪಿಸಿ ರಂಗಭೂಮಿಯಲ್ಲೂ ಹೆಜ್ಜೆ ಗುರುತು ಮೂಡಿಸಿದರು.

ಎಳೆಯ ವಯಸ್ಸಿನಿಂದಲೇ ಅಕ್ಕನಿಂದ ಸಂಗೀತ ಪಾಠಗಳನ್ನು ಕಲಿತ ಸೋನುಬಾಯಿಯನ್ನು ಒಳ್ಳೆಯ ಗುರುವಿನ ಬಳಿ ಸಂಗೀತ ವ್ಯಾಸಂಗಕ್ಕೆ ಸೇರಿಸಬೇಕೆಂದು ತಾಯಿ ಪೀರವ್ವ ಪ್ರಯತ್ನಿಸಿದ್ದರು. ಆದರೆ ದೊಡ್ಡಮ್ಮನ ಕಂಪನಿಯಲ್ಲಿ ಬಾಲಕಿ ಸೋನುಬಾಯಿ ನಟಿ ಹಾಗೂ ಹಾಡುಗಾರ್ತಿಯಾಗಿ ಅಷ್ಟೊತ್ತಿಗೆ ಗಮನ ಸೆಳೆಯಲು ಆರಂಭಿಸಿದ್ದಳು. ಸೋನುಬಾಯಿ ವಿಚಾರ ತಿಳಿದಿದ್ದ ಬಸವನ ಗೌಡರು ಆಕೆಗೆ ಒಳ್ಳೆಯ ಗುರುಗಳಿಂದ ಸಂಗೀತ ಶಿಕ್ಷಣ ಕೊಡಿಸುವ ಆಶ್ವಾಸನೆಯನ್ನು ತಾಯಿ ಪೀರವ್ವನಿಗೆ ಕೊಟ್ಟು ತಮ್ಮ ಕಂಪನಿಗೆ ಸೇರಿಸಿಕೊಂಡರು. ಇವರ ಅಬ್ಬಿಗೇರಿ ಕಂಪನಿ ಪ್ರದರ್ಶಿಸುತ್ತಿದ್ದ ಎಲ್ಲಾ ನಾಟಕಗಳಲ್ಲೂ ಪುಟ್ಟ ಪಾತ್ರಗಳು ಪುಟ್ಟ ಸೋನುಬಾಯಿ ಪಾಲಿಗಿರುತ್ತಿದ್ದವು.

ಕುಂದಗೋಳ ಫಕೀರಪ್ಪ, ಗುರುರಾಯ ದೇಶಪಾಂಡೆ ಅವರಿಂದ ಸಂಗೀತ ಕಲಿತ ಸೋನುಬಾಯಿ ಅವರನ್ನು ಖ್ಯಾತ ಸಂಗೀತಗಾರ ಉಸ್ತಾದ್ ಖಾನ್ ಅಬ್ದುಲ್ ಕರೀಂಖಾನ್‌ರಲ್ಲಿ ಸೇರಿಸಲು ಯತ್ನಗಳು ನಡೆದರೂ ಸಫಲವಾಗಿರಲಿಲ್ಲ. ಆಗಷ್ಟೇ ಹದಿಹರೆಯಕ್ಕೆ ಕಾಲಿಡುತ್ತಿದ್ದ ಸೋನುಬಾಯಿ 'ಪಾದುಕಾ ಪಟ್ಟಾಭಿಷೇಕ' ನಾಟಕದಲ್ಲಿ ಸೀತೆ ಪಾತ್ರ ನಿರ್ವಹಿಸಿದರು.

ಅಬ್ಬಿಗೇರಿ ಕಂಪನಿ ನಿಂತಮೇಲೆ ಪೀರವ್ವ ಮಗಳನ್ನು ಸೇರಿಸಿದ್ದು 'ಅಂಬಾ ಪ್ರಸಾದಿಕಾ ನಾಟಕ